Regd No M 1229 SRI 'Satyavadi' Mysore 42nd Year 27—2—1958

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಮರನೆ ಸಿಂಸ್ಥೇದಾರ್ ಎಂ. ವಿ ಸುಬ್ಬರಾಯರು [ಪ್ರಸ್ತುತ 3 ಪೈ

Protect the cow
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ
ಗೋಸಂರಕ್ಷಣೆ ಮಾಡಿ

ರೈಲುಗಳು ಡಿಕ್ಕಿ ಬಡಿದು ಆರು ಜನರ ಮರಣ

ವಿಚಾರಣೆ ನಡೆಸುವದಾಗಿ ರೈಲ್ವೆ ಸಚಿವರ ಆಶ್ವಾಸನೆ

ಕಲ್ಕತ್ತಾ 26 — ಈ ಬೆಳಿಗ್ಗೆ ಕಲ್ಕತ್ತಾಕ್ಕೆ 10 ಮೈಲಿಗಳ ಆಗ್ನೇಯದಲ್ಲಿರುವ ಸೋನಾಪುರ ಜಂಕ್ಷನ್ನಿನ ಉತ್ತರ ಕ್ಯಾಬಿನ್ನಿನ ಬಳಿ ಎದುರುಬದರು ದಿಕ್ಕಿಗೆ ಹೋಗುತ್ತಿದ್ದ ಎರಡು ರೈಲುಗಳು ಡಿಕ್ಕಿ ಬಡಿದು 6 ಜನರು ಸತ್ತು 44 ಜನರು ಗಾಯಗೊಂಡರು ಅತಿ ವೇಗ ಮತ್ತು ಬೇಜವಾಬ್ದಾರಿ ಡ್ರೈವಿಂಗು ಅರೋಪದ ಮೇಲೆ ಪೋಲೀಸರು ಕ್ಯಾನಿಂಗ್-ಬಾಂಡ್ ರೈಲಿನ ಡ್ರೈವರನನ್ನು ಪೋಲೀಸರು ಬಂಧಿಸಿದ್ದಾರೆ.

ಂ ಂ

ಪಶ್ಚಿಮ ಬಂಗಾಳದ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಡಾ|| ಬಿ. ಸಿ. ರಾಯರವರು ಹೇಳಿಕೆ ಇತ್ತು ಸಿಗ್ನಲಿನ ತಪ್ಪಿನಿಂದ ಈ ಘಟನೆ ನಡೆಯಿತೆಂದು ತಿಳಿಸಿದರು.

ಂ ಂ

ನವ ದೆಹಲಿ 26 — ಸೋನಪುರ ಬಳಿ ಆದ ರೈಲು ಅನಾಹುತದ ಬಗ್ಗೆ ವಿಚಾರಣೆ ನಡೆಸುವ ಭರವಸೆಯನ್ನು ರೈಲ್ವೆ ಮಂತ್ರಿ ಶ್ರೀ ಜಗಜೀವನ ರಾಂ ರಾಜ್ಯ ಸಭೆಯಲ್ಲಿ ಇತ್ತರು.

——

ಬೆಂಗಳೂರು 26 — ಹಿಂದೂಸ್ತಾನ ವಿಮಾನ ಕಾರ್ಖಾನೆ ಕಾರ್ಮಿಕರ ಮೇಲೆ ಗೋಳಿಬಾರು ಮತ್ತು ಲಾಠಿ ಛಾರ್ಜ ಆದ ಸಂಬಂಧದ ಸಿಲವಳಿ ಸೂಚನೆಯ ಚರ್ಚೆಗೆ ವಿಧಾನ ಸಭೆಯಲ್ಲಿ ಅವಕಾಶ ಸಿಗಲಿಲ್ಲ

ದೂರ ಪ್ರಾಚ್ಯದಲ್ಲಿ ರಷ್ಯ ತನ್ನ 5 ಲಕ್ಷ ಸೇನೆಯಿಟ್ಟಿರುವದಾಗಿ ಟೋಕಿಯೋ ವಾರ್ತೆ

ನತ್ತ ಮೇಲೆ ಸಹಾಯ!

ಲಕ್ನೋವಿನ ಬಿಮ್ಲಾದೇವಿ ತೀವ್ರ ಖಾಯಿಲೆಗೊಂಡಿದ್ದು, ಸ್ಥಳೀಯ ಆಸ್ಪತ್ರೆಗೆ ಸೇರಿಸಲ್ಪಡಲು ಕಳೆದ ಸೆಪ್ಟಂಬರಿನಲ್ಲಿ ಆಸ್ಪತ್ರೆ ಅಧಿಕಾರಿಗಳನ್ನು ಪ್ರಾರ್ಥಿಸಿದಳು ; ಸ್ಥಳವಿಲ್ಲದಿದ್ದುದರಿಂದ ಸೇರಿಸಲಾಗಲಿಲ್ಲ ; ಆದರೆ ಖಾಲಿ ಯಾದ ಕೂಡಲೇ ತಿಳಿಸುವುದಾಗಿ ಅಳಿಗೆ ಹೇಳಿ ಕಳುಹಿಸಿದರು ; ಆಸ್ಪತ್ರೆಯಲ್ಲಿ ಸ್ಥಳ ಪಡೆಯಲು ಅಪಜಯವಾದ ಕೆಲವು ದಿನಗಳಲ್ಲಿ ಆಕೆ ನಿಧನಳಾದಳು ; ಆದರೆ ಮನಸ್ಸಾಕ್ಷಿಯಂತೆ ನಡೆಯುವ ಆಸ್ಪತ್ರೆ ಅಧಿಕಾರಿಗಳು ಫೆಬ್ರವರಿ 14 ರಲ್ಲಿ ಬಿಮ್ಲಾದೇವಿಯ ಅಡ್ರೆಸ್ಸಿಗೆ ಒಂದು ಕಾಗದ ಬರೆದು, ಫೆಬ್ರವರಿ 15 ಮಧ್ಯಾಹ್ನ 12 ಗಂಟೆಗೆ ಬಂದು ಸೇರಲು ಒಂದು ಹಾಸಿಗೆ ಸಿದ್ಧವಾಡಲಾಗಿದೆ ಎಂದು ತಿಳಿಸಿರುವರು !

ಸಲಹೆ ಕೊಡಲು ಆಫ್ರಿಕಾ ಸ್ತ್ರೀ

ಫ್ರಾನ್ಸಿನಲ್ಲಿ ವಾಸಿಸುತ್ತಿರುವ ಆಫ್ರಿಕನ್ನರ ಸಮಸ್ಯೆ ಬಗ್ಗೆ ಸೂಚನೆ ಕೊಡಲು ಪಶ್ಚಿಮ ಆಫ್ರಿಕಾ ದೊಹೋಮಿಯಾದ ಡಾ || ಸೊಲಂಗೆ ಫಲಾಡೆ ಎಂಬ ಆಫ್ರಿಕಾ ಸ್ತ್ರೀ ಸಲಹೆಗಾರರಾಗಿ ನೇಮಿಸಲ್ಪಟ್ಟಿರುವರು; ಉನ್ನತ ಫ್ರೆಂಚ್ ಸಂಕಾರಿ ಅಧಿಕಾರ ಪಡೆದಿರುವ ಪ್ರಪ್ರಥಮ ಆಫ್ರಿಕಾ ಮಹಿಳೆ ಇವಳು.

ಸುಧಾ ಜೋಷಿ ಉಪವಾಸ

ನವ ದೆಹಲಿ 26 — 10 ವರ್ಷಗಳ ಶಿಕ್ಷೆಗೊಳಗಾಗಿರುವ ಶ್ರೀಮತಿ ಸುಧಾ ಜೋಷಿ ಗೋವಾದ ಮಾಂಡಗಾರ್ಜ ಜೈಲಿನಲ್ಲಿ ಉಪವಾಸ ಹೂಡಿದ್ದಾರೆ

ಕಳ್ಳ ಪ್ಯಾಸ್‌ಪೋರ್ಟು ದೊರೆ

ಬೊಂಬಾಯಿ 24— ಪ್ಯಾಸ್‌ಪೋರ್ಟು ಕೊಡುವ ಕಂಡದ ಮುಖಂಡ ಥಾಕುರ ದಾಸ್ ಮಾಲ್ಹೋತ್ರನೆಂಬಾತನು ಡೆಲ್ಲಿಯಲ್ಲಿ ಸ್ಪೆಷಲ್ ಪೋಲೀಸರಿಂದ ದಸ್ತಗಿರಿ ಮಾಡಲ್ಪಟ್ಟು ಬೊಂಬಾಯಿಗೆ ತರಲ್ಪಟ್ಟನು — ಪ್ಯಾ ಜೆ ಸ್ಟ್ರೇಟರು ಆತನನ್ನು ಮಾರ್ಚಿ 10 ರವರೆಗೆ ಪೋಲೀಸು ಕಸ್ಟಡಿಗೆ ಆರ್ಡರು ಮಾಡಿದರು — ಅಪರಾಧಿಯು ಒಂದು ಭಾರಿ ಸೆಕ್ರೆಟೇರಿಯಟ್ಟನ್ನೇ ಇಟ್ಟು, ತಾನು ರೀಜನಲ್ ಪ್ಯಾಸ್‌ಪೋರ್ಟು ಆಫೀಸರೆಂದು ಕರೆದುಕೊಳ್ಳುತ್ತಾ ವಿವಿಧ ರಾಜ್ಯಗಳಿಗೆ ಪ್ರಯಾಣಿಕರಿಗೆ 5000 ರೂಗಳಿಂದ 7000 ರೂಗಳವರೆಗೆ ಚಾರ್ಜು ನೂಡಿ ಪ್ಯಾಸು ಪೋರ್ಟು ಕೊಡುತ್ತಿದ್ದನೆಂದು ಪೋಲೀಸರು ಆಪಾದಿಸಿರುವರು.

ಚುನಾವಣೆ ಬಗ್ಗೆ ಪಾರ್ಲಿಮೆಂಟರಿ ಸಮಿತಿ

ನವದೆಹಲಿ 24— ಚುನಾವಣೆಯಲ್ಲಿ ಸೋತ ಕಾಂಗ್ರೆಸ್ಸು ಉಮೇದುವಾರರು ಶಾಸನ ಸಭೆಗಳಿಗೆ ಹಿಂತ್ತಲ ಬಾಗಲಿನಿಂದ ಪ್ರವೇಶಿಸಲ್ಪು ಅವಕಾಶವಿಲ್ಲವೆಂಬ ವಿಷಯವನ್ನು ಹೊಸದಾಗಿ ರಚಿಸಲ್ಪಟ್ಟ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟು ಬೋರ್ಡು ಅನುಸರಿಸುವುದು.

ಚರ್ಚೆಗೆ ಅವಕಾಶವಿಲ್ಲ

ನವ ದೆಹಲಿ 25 — ಹಿಂದೂಸ್ತಾನ ವಿಮಾನ ಕಾರ್ಖಾನೆ ಕಾರ್ಮಿಕರ ಮೇಲೆ ಗುಂಡು ಹಾರಿಸಿದ ನಿಲುವಳಿ ಸೂಚನೆ ಚರ್ಚೆ ಲೋಕಸಭೆಯಲ್ಲಿ ಸ್ಪೀಕರ್ ಶ್ರೀ ಅನಂತಶಯನಂ ಅಯ್ಯಂಗಾರ್ ರವರು ತಿರಸ್ಕರಿಸಿದರು

ಹೆಣಗಳನ್ನೆತ್ತಿದರು

ಅನಂತಪುರ 25 — ಬಸ್ ಅನಾಹುತದಲ್ಲಿ ಸತ್ತವರ ಸೈಕಿ 39 ಜನರನ್ನು ಭಾವಿಯಿಂದ ಹೊರ ತೆಗೆದಿದೆ

ತೀವ್ರ ಕ್ರಮ

ಕರಾಚಿ 24 — ಕಾಶ್ಮೀರದ ವಿಚಾರದಲ್ಲಿ ಭಾರತವು ತನ್ನ ನಡವಳಿಕೆಯನ್ನು ಒದಲಾಯಿಸಿಕೊಳ್ಳದಿದ್ದರೆ, ತೀವ್ರ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ಪಾಕಿಸ್ತಾನ ಪ್ರಧಾನಿ ನೂನಂ ಮುಲ್ತಾನಿನಲ್ಲಿ ನಿನ್ನೆ ಸಂಜೆ ಒಂದು ಬಹಿರಂಗ ಸಭೆಯಲ್ಲಿ ಹೇಳಿದರೆಂದು ವರದಿಯಾಗಿದೆ.

——

ನ್ಯೂಯಾರ್ಕ್ 23— ಅಮೆರಿಕದ 82 ವೈದ್ಯಕೀಯ ಶಾಲೆಗಳಿಗೆ ವೈದ್ಯಕೀಯ ರಾಷ್ಟ್ರೀಯ ನಿಧಿಯಿಂದ 3 ಮಿಲಿಯಕ್ಕೂ ಹೆಚ್ಚಾಗಿ ಗ್ರಾಂಟು ಕೊಡಲಾಯಿತು.

ಂ ಂ

ಜಮ್ಮು 26— ಷೇಕ್ ಅಬ್ದುಲ್ಲಾವಿನ ದೇಶದ್ರೋಹ ಚಾಲೋಕುಗಳೆಲ್ಲಾ ಮುಟ್ಟಾಹಾಕಲ್ಪಡುವವೆಂದು ಕಾಶ್ಮೀರ ಪ್ರಧಾನಿ ಭಕ್ಷಿ ಹೇಳಿರುವರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾಂ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
28 ನವಮಿ ಮೃಗಶಿರ

ಗಿರಣಿ ಮುಚ್ಚಲು ಕಾರಣ

ನವದೆಹಲಿ 25— ದಾಸ್ತಾನು ಹೆಚ್ಚಾಗಿ ಮತ್ತಿತರ ಕಾರಣಗಳಿಗಾಗಿ 3 ಹತ್ತಿ ಗಿರಣಿಗಳು 1957 ನೇ ಅಕ್ಟೋಬರಿನಿಂದ 58 ನೇ ಜನವರಿಯವರೆಗೆ ಮುಚ್ಚಲ್ಪಟ್ಟಿದ್ದವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ಭಾರತದ ಗೌರವ

ಲಂಡನ್ 24— ಭಾರತ ಪ್ರಜಾಪ್ರಭುತ್ವದ ಸ್ವತಂತ್ರ ವಿಶ್ವ ಶಾಂತಿ ಪ್ರಿಯ ನೀತಿಯು ಪ್ರಪಂಚದ ಜನರಿಂದ ತುಂಬಾ ಗೌರವವನ್ನು ಸಂಪಾದಿಸಿದೆ ಎಂದು ಇಂಗ್ಲೆಂಡಿನಲ್ಲಿ ರಷ್ಯಾ ರಾಯಭಾರಿಯಾದ ಮಿ || ಜಾಕಬ್ ಮಾಕ್ ಹೇಳಿರುವರು.

ಪ್ರತಿಬಟನೆ

ಲಂಡನ್ ಕಾಮನ್ಸ್ ಸಭೆಯ ಮುಂದೆ ತಾ|| 24 ರಂದು 3520 ಮಂದಿ ಹುಂವ ನಸ್ಥರು ಪ್ರದರ್ಶನ ನಡೆಸಿ, ಬ್ರಿಟನ್ನಿನಲ್ಲಿ ಮಿಸೈಲ್ ನಿರ್ಮಾಣಗಳನ್ನು ಸ್ಥಾಪಿಸುವುದರ ಬಗ್ಗೆ ಪ್ರತಿಭಟಿಸಿದರು .... 'ಸೆಂಟ್ರಲ್' ಲಾಬಿಯಲ್ಲಿ 'ಪಾರ್ಲಿಮೆಂಟು ಮೆಂಬರುಗಳನ್ನು ಅವರು ಸಂದರ್ಶಿಸಲು 20–30 ಮಂದಿಯ ಗುಂಪುಗಳಂತೆ ಬಿಡಲಾಯಿತು.

ನಮ್ಮ ದೇಶದ ಲೇಖಕಿಯ ಕಥೆ

ಮಾಸ್ಕೊ— ವಿದೇಶೀ ಸಾಹಿತ್ಯ ಪ್ರಕಟನಾಲಯವು ಭಾರತೀಯ ಕತೆಗಳ ಒಂದು ಸಂಪುಟವನ್ನು ಇದೇ ಈಗ ಪ್ರಕಟಿಸಿದೆ ; ಈ ಸಂಕಲನದ 44 ಕತೆಗಳನ್ನು 18 ಮಂದಿ ಸಮಕಾಲೀನ ಭಾರತೀಯ ಲೇಖಕರು ಬರೆದಿದ್ದಾರೆ ; ಆ ಲೇಖಕರ ಪೈಕಿ ಅನೇಕ ಮಂದಿ ಸೋವಿಯತ್ ಒಕ್ಕೂಟದಲ್ಲಿ ಈಗಾಗಲೇ ಚೆನ್ನಾಗಿ ಪರಿಚಿತರಾಗಿದ್ದಾರೆ ; ಅವರು ಬಂಗಾಳಿ ಮತ್ತು ಹಿಂದಿ ಭಾಷೆಯ ಲೇಖಕರಾಗಿದ್ದು, ಅವರ ಹಲವು ಕೃತಿಗಳು ಈಗಾಗಲೇ ರಶಿಯನ್ ಭಾಷೆಗೆ ಅನುವಾದಿಸಲ್ಪಟ್ಟಿವೆ : ಇದರ ಪರಿಣಾಮವಾಗಿ ಇವರ ಕೃತಿಗಳ ಪ್ರಕಟನೆಯು ಸೋವಿಯತ್ ಓದುಗರಿಗೆ ವಿಶೇಷ ಆಸಕ್ತಿ ಜನಕವಾಗಿದೆ.

ಕೆಳಗಿನ ಚಿತ್ರ —

ಅಮೇರಿಕದ ಕಾಂಟ್ರಾಲ್ಟೊ ಆದ ಮೆರಿಯನ್ ಆಂಡರ್ಸನ್ ಏಷ್ಯದ 10 ದೇಶಗಳಲ್ಲಿ ಪ್ರವಾಸ ಮಾಡಿದರು ಈ ಚಿತ್ರದಲ್ಲಿ ಮಿಸ್ ಆಂಡರ್ಸನ್ ಟಿಲಿವಿಷನ್ ಟೀಕೆಗಾರ ಮರ್ಫೀ ಸಂಗಡ ತಮ್ಮ ಪ್ರವಾಸ ಕುರಿತು ಮಾತಾಡುತ್ತಿರುವದು

ವುಡ್‌ಲಾಂಡ್ಸ್ 21–2–58 ರಿಂದ
ಅಮೋಘ ಪ್ರದರ್ಶನ

ಮೊದಲಿನಿಂದ ಕೊನೆಯವರೆಗೆ ನಿಮ್ಮನ್ನು ಮುಗ್ಧರನ್ನಾಗಿ ಮಾಡುವ ಚಿತ್ರ

ಬಿಮಲ್ ರಾಯ್‌ರ **ಅಪರಾಧಿ ಕೋನ್?** (ಹಿಂದಿ)

(ಅಪರಾಧಿ ಯಾರು ?)

ಪಾತ್ರ — ಮೂಲಾಸಿಂಹ, ಅಭಿಭಟ್ಟಾಚಾರ್ಯ, ಜಾಗಿರ್ದಾರ್, ಲಿಲಿಯನ್

ದಿನವಹಿ 3 ಪ್ರದರ್ಶನಗಳು

ಅಪರಾ— ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿರುವ
ಅಮೋಘ 3 ನೇ ವಾರ

ಭೂ ಕೈ ಲಾ ಸ (ಕನ್ನಡ)

ಜಮುನ, ಗೋಪಿಕೃಷ್ಣ, ರಾಜಕುಮಾರ್, ಕುಮಾರಿಕಮಲ, ರಾಜಸುಲೋಚನ
ಅಭಿನಯಿಸಿರುವ ಮಹೋನ್ನತ ಕನ್ನಡ ಚಿತ್ರ ರತ್ನ

— ಪ್ರತಿ ದಿನ 3 ಆಟಗಳು —

ಎಲ್ಲ ವಿಧ ಕಾಂಪ್ಲಿಮೆಂಟರಿ, ಫ್ರೀ ಪಾಸುಗಳನ್ನು 4 ವಾರಗಳು ಮನ್ನಾ ಮಾಡಿದೆ

ಯುಮಾ ಟಾಕೀಸ್ 28–2–58 ರಿಂದ

ತೂಫಾನ್ ಕ್ವೀನ್ (ತಮಿಳು ಚಿತ್ರ)
[ದಿನ 3 ಆಟಗಳು]

ಪಾತ್ರ— ಆರ್. ಬಿ. ಲಕ್ಷ್ಮೀದೇವಿ, ರಾಜಗೋಪಾಲ್

ಬೆಳಗಿನ ಪ್ರದರ್ಶನ 10–30 ಕ್ಕೆ — ತಾ || 28 ರಿಂದ 3 ದಿವಸಗಳು ಮಾತ್ರ

KILLER APE (Technicolor Picture)

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
Contract above 100 inches	1-00
500	0-75

Column width 2 inches; length 12½ inches; 4 columns to a page
The decision of the management is final in all matters
Manager "**Satyavadi**", Chamarajpuram, Mysore

For Quality Printing
L. N. Press
Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ,
ಅಶೋಕ ಫಾರ್ಮಸಿ
ಅಶೋಕ್ ರಸ್ತೆ, ಮೈಸೂರು

Edited, Printed & Published by Dharma Prachara Nirata M S Krishna Rao, at the Satyavadi Press Chamarajapuram Mysore